## ಬೇಸರವಾಯಿತು

ಕಲರ್ಸ್ ಕನ್ನಡದಲ್ಲಿ ಮೇ 8 ರಂದು 'ಕನ್ನಡತಿ' ಪ್ರಸಾರವಾಗದೆ ಇದ್ದಿದ್ದು ತುಂಬ ನಿರಾಸೆಯನ್ನು ಉಂಟುಮಾಡಿತು. ಅದರ ಬದಲು 'ಮಂಗಳಗೌರಿ ಮದುವೆ'ಯ ಮಹಾಸಂಚಿಕೆ ಪ್ರಸಾರ ಮಾಡಿದ್ದು ಕನ್ನಡತಿಗೆ ಕುತ್ತಾಯಿತು ಎಂದೆನಿಸಿತು. ಇದರಲ್ಲಿ ಪ್ರಸಾರವಾಗುವ ಉಳಿದ ಧಾರಾವಾಹಿಗಳಿಗೆ ಹೋಲಿಸಿದರೆ 'ಮಂಗಳಗೌರಿ...'ಗೆ ಕೊನೆ ಸ್ಥಾನ. 'ಕನ್ನಡತಿ'ಗೆ ಮೊದಲ ಸ್ಥಾನ ನೀಡುತ್ತೇನೆ. ಭಾನುವಾರ ಒಂದು ದಿನ ಕನ್ನಡತಿ ಇಲ್ಲ ಎಂದರೆ ಏನೋ ಕಳೆದುಕೊಂಡ ಅನುಭವ ದಯವಿಟ್ಟು ಇನ್ನು ಮುಂದೆ ಹೀಗಾಗದಂತೆ ನೋಡಿ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ವಿಕೃತಿಗೆ ಬ್ರೇಕ್ ಹಾಕಿ

ಕೋವಿಡ್ ನಿಯಮ ಉಲ್ಲಂಘಿಸಿ ರಸ್ತೆಯಲ್ಲಿ ಸಂಚರಿಸುವವರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದರೆ ನಮ್ಮ ಸುದ್ದಿವಾಹಿನಿಯವರು ಅದನ್ನು ಚಿತ್ರೀಕರಿಸಿ, ಆ ದೃಶ್ಯಗಳನ್ನು ತಮಗೆ ಬೇಕಾದಂತೆ ಕತ್ತರಿಸಿ ಜೋಡಿಸಿ, 'ಬಿಸಿ ಬಿಸಿ ಕಜ್ಜಾಯ, ರುಚಿ ರುಚಿ ಕಜ್ಜಾಯ ಮಾಡಿಕೊಡುವೆ ನಾನು, ತಗೋ ತಿನ್ನು, ತಗೋ ತಿನ್ನು' ಎಂಬ ಹಿನ್ನೆಲೆ ಹಾಡನ್ನು ಸೇರಿಸಿ ಬಿತ್ತರಿಸಿದರು. ಈ ವಿಕೃತಿಯಲ್ಲಿ ಪೊಲೀಸರನ್ನು ಕಟುಕರೆಂದು ಬಿಂಬಿಸಲು ಯತ್ನಿಸುವುದರ ಜೊತೆಗೆ ಜನರ ಮಾನಸಿಕ ನೆಮ್ಮದಿಗೆ ಭಂಗ ತಂದಿದ್ದಾರೆ. ಜೊತೆಗೆ ಪೊಲೀಸರ ಮಾನಸಿಕ ಸ್ಥೈರ್ಯವನ್ನೂ ಕುಗ್ಗಿಸುತ್ತಿದ್ದಾರೆ. ಕೋವಿಡ್ ನಿಯಮ ಉಲ್ಲಂಘಿಸುವ ವಾಹನ ಸವಾರರ ಮೇಲೆ ಲಾಠಿಪ್ರಹಾರ ಮಾಡುವ ಬದಲು ಅವರೇನಾದರೂ ಬೇಕಾಬಿಟ್ಟಿ ಸುತ್ತಾಡಿದರೆ ಅಂತಹವರನ್ನು ಅರ್ಧ ಗಂಟೆ ಅಥವಾ ಒಂದು ಗಂಟೆಯ ಕಾಲ ಸ್ಥಳದಿಂದ ಕದಲದಂತೆ ಅವರ ವಾಹನವನ್ನು ಸ್ವಾಧೀನಪಡಿಸಿಕೊಳ್ಳಿ. ನಂತರ ಬಿಟ್ಟುಬಿಡಿ. ಅದರಿಂದ ಅವರನ್ನು ದಂಡಿಸಿದಂತೆಯೂ ಆಗುತ್ತದೆ. ಸುದ್ದಿ ವಾಹಿನಿಗಳ ವಿಕೃತಿಗೆ ಬ್ರೇಕ್ ಬೀಳುವ ಜೊತೆಗೆ ಪೊಲೀಸರ ಮಾನಸಿಕ ಸ್ಥೈರ್ಯ ಕುಗ್ಗುವುದೂ ತಪ್ಪುತ್ತದೆ.

—ಪಿ.ಜೆ. ರಾಘವೇಂದ್ರ, ಮೈಸೂರು

## ಬಿಗ್ ಬಾಸ್: ಪ್ರೇಮ ತಾಣವೋ?

ಕಲರ್ಸ್ ಕನ್ನಡದ 'ಬಿಗ್ ಬಾಸ್' ಮನೆಯಲ್ಲಿ ಎರಡು ಜೋಡಿಗಳು ಪ್ರೇಮದಲ್ಲಿ ಸಿಲುಕಿಕೊಂಡಿದ್ದವು. ಯಾವುದೇ ವರ್ತನೆಗೂ ಒಂದು ಚೌಕಟ್ಟು ಇರುತ್ತದೆ. ತಾವು ಗಾಜಿನಮನೆಯಲ್ಲಿ ಇದ್ದೇವೆ ಎಂಬುದನ್ನು ಆಜೋಡಿಗಳು ಮರೆತಿದ್ದವು. ಮನೆಗೆ ಪ್ರವೇಶವಾಗಿ 50 ದಿನಗಳಲ್ಲಿ ಪ್ರೀತಿಯು ಉತ್ತುಂಗಾವಸ್ಥೆಯನ್ನು ತಲುಪಿದೆ ಎಂದರೆ ಆಶ್ಚರ್ಯ. ಒಂದರೆಕ್ಷಣವೂ ಬಿಟ್ಟಿರಲಾರದ ಅನುಬಂಧ. ಒಬ್ಬರ ಮೇಲೆ ಒಬ್ಬರು ಬಿದ್ದುಕೊಳ್ಳುವುದು, ಆಲಿಂಗಿಸುವುದು, ದೀಪವಾರಿದ ನಂತರ, ಕಣ್ಸನ್ನೆಯಲ್ಲಿ ಮಾತಾಡುವುದು, ಪ್ರೇಮವನ್ನು ನಿವೇದಿಸುವುದು.

ಅವರ ವರ್ತನೆಗಳು ಕೆಲವು ಪ್ರೇಮಿಗಳಿಗೆ ಸಹ್ಯವಾಗಬಹುದು. ಆದರೆ ಅನೇಕ ಜನರಿಗೆ ಜುಗುಪ್ಸೆ, ಅಸಹ್ಯವನ್ನು ಹುಟ್ಟುಹಾಕಿದ್ದವು. ಪ್ರೇಮದಾಟಗಳು ನಾಲ್ಕು ಗೋಡೆಗಳ ಮಧ್ಯದಲ್ಲಿದ್ದರೆ ಚಂದ. ಅದು ಬಿಟ್ಟು ಕಾರ್ಯಕ್ರಮ ವೀಕ್ಷಿಸುವ ಕೋಟ್ಯಂತರ ವೀಕ್ಷಕರ ಬಾಯಿಗೆ ಆಹಾರವಾದರೆ ಏನು ಚೆನ್ನ? ಮುಂದಿನ ದಿನಗಳಲ್ಲಿಯಾದರೂ ಸ್ವಲ್ಪ ಗಂಭೀರತೆ ಇರಲಿ.

ಯಾರೋ ಒಬ್ಬರು ದೂರವಾಣಿ ಕರೆಮಾಡಿ, ನಿಮ್ಮಿಬ್ಬರ ಕೆಮಿಸ್ಟ್ರಿ ತುಂಬಾ ಚೆನ್ನಾಗಿದೆ. ಎಂದಾಕ್ಷಣ ಅದು ಸಾರ್ವಜನಿಕ ಅಭಿಪ್ರಾಯವಲ್ಲ ಎಂಬುದೂ ಅವರ ಗಮನದಲ್ಲಿ ಇರಬೇಕು. 'ಬಿಗ್‌ಬಾಸ್' ಅವರ ಹುಚ್ಚಾಟಕ್ಕೆ ಸ್ವಲ್ಪ ಕಡಿವಾಣ ಹಾಕಬೇಕಿತ್ತು ಆದರೆ ಹಾಕಲಿಲ್ಲ. ಅದು ಕಾರಣಾಂತರದಿಂದ ಅರ್ಧಕ್ಕೆ ನಿಲ್ಲಬೇಕಾಗಿ ಬಂತು. ಮನೆಯೊಳಗೆ ಅಂಕುರವಾದ ಪ್ರೇಮ ಈಗ ಎಲ್ಲಿಗೆ ಬಂತೋ ಗೊತ್ತಿಲ್ಲ. ಅದು ಅವರ ಖಾಸಗಿ ವಿಷಯ. ಬಿಗ್‌ಬಾಸ್ ಮನೆಯಲ್ಲಿಯೂ ಖಾಸಗಿಯಾಗಿ ಇರಬೇಕಿತ್ತು.

—ಪುಷ್ಪ ಎನ್.ಕೆ. ರಾವ್

**ವಾರದ ಪತ್ರ**

## ಹೀಗೊಂದು ಜಾಹೀರಾತು ಬರಲಿ

ಖಾಸಗಿ ವಾಹಿನಿಗಳು ಜಿದ್ದಿಗೆ ಬಿದ್ದವರಂತೆ ಜಾಹೀರಾತು, ಧಾರಾವಾಹಿ, ರಿಯಾಲಿಟಿ ಶೋಗಳನ್ನು ಬಿತ್ತರಿಸುತ್ತಿವೆ. ಕೇಬಲ್/ ನೆಟ್‌ವರ್ಕ್‌ಗೆ ಪ್ರತಿ ತಿಂಗಳಿಗೆ ಶುಲ್ಕವನ್ನೂ ಪಾವತಿಸಬೇಕು. ಇದರ ನಡುವೆ ಶ್ರೀಗಂಧ ಗಮಲಿನ ಚಂದನ ವಾಹಿನಿಯು ಜ್ಞಾನ, ವಿಜ್ಞಾನ, ಪರಿಸರ, ಸಾಹಿತ್ಯ, ಸಂಗೀತ, ಸಿನಿಮಾ, ನಾಟಕ ಹೀಗೆ ಹಲವು ಬಗೆಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ. ಇದು ಪ್ರದೇಶ, ಲಿಂಗ, ಧರ್ಮ, ಜಾತಿ ಭೇದ ಇಲ್ಲದೆ ಜನಮನ್ನಣೆ ಗಳಿಸಿದೆ. ಬಡವರು ತಿಂಗಳ ಕೇಬಲ್ ವಂತಿಗೆಯಿಂದ ಬಚಾವಾಗಲು ಇಚ್ಛಿಸಿದರೆ ಅವರಿಗೆ ಉಚಿತ ವಾಹಿನಿಗಳನ್ನು ಪಡೆಯುವ ಬಗ್ಗೆ ಮಾಹಿತಿ ಮತ್ತು ಪರಿಕರಗಳ ಬಗ್ಗೆ ಜಾಹೀರಾತನ್ನು ದೂರದರ್ಶನ–ಚಂದನ ಅನುದಿನ ಪ್ರಸಾರ ಮಾಡಲಿ ಎಂದು ಮನವಿ ಮಾಡುತ್ತೇನೆ.

—ಮಲ್ಲಿಕಾರ್ಜುನ ಸುರಧೇನುಪುರ

## ಮನ ಕಲಕಿತು

ಝೀ ಕನ್ನಡದ 'ಮಹಾನಾಯಕ'ದಲ್ಲಿ ಭೀಮ್‌ರಾವ್ ಅವರ ತಾಯಿ ಭೀಮಾಬಾಯಿ ಅವರ ಜೀವನ ಯಾತ್ರೆಯ ಅಂತಿಮ ದಿನಗಳು ಮನ ಕಲಕಿತು. ಭೀಮಾಬಾಯಿಯ ಪಾತ್ರಧಾರಿ ಆರಂಭದಿಂದಲೂ ಅಮೋಘವಾಗಿ ನಟಿಸಿದ್ದಾರೆ. ನಗು, ಅಳು, ಚುರುಕಾದ ಓಡಾಟ ಎಲ್ಲದರಲ್ಲೂ ಎತ್ತಿದ ಕೈ. ಅಂತೆಯೇ ಅವರ ಪತಿ ರಾಮ್‌ಜಿ, ಅಂಬೇಡ್ಕರ್ ಪಾತ್ರಧಾರಿಗಳ ಅಭಿನಯ, ಛಾಯಾಗ್ರಹಣ, ಹಳ್ಳಿಯ ಪರಿಸರ ಎಲ್ಲವೂ ಅತ್ಯುತ್ತಮ.

—ಅನಂತಪದ್ಮನಾಭ ಪಿ.ಜಿ., ಮೈಸೂರು

## ಮರು ಪ್ರಸಾರ ಮಾಡಲಿ

ಝೀ ಕನ್ನಡದಲ್ಲಿ ಉತ್ತಮ ಮನೋರಂಜನೆಯ ಕಾರ್ಯಕ್ರಮ ನೀಡುತ್ತಿದೆ. ಈಗ ಕೊರೊನಾದಿಂದಾಗಿ ಡಾನ್ಸ್ ಕಾರ್ಯಕ್ರಮ ರದ್ದು ಮಾಡಿದ್ದಾರೆ. ವೀಕ್ಷಕರಿಗೆ ಮನೋರಂಜನೆಯ ಕಾರ್ಯಕ್ರಮಗಳಿಲ್ಲದೆ. ಅನೇಕ ಉತ್ತಮ ಕಾರ್ಯಕ್ರಮಗಳನ್ನು ನೀಡಿದ ಝೀ ವಾಹಿನಿ ಹಳೆಯ ಸರಿಗಮಪ ಜೂನಿಯರ್– ಸೀನಿಯರ್ ಹಾಗೂ ಡ್ರಾಮಾ ಜೂನಿಯರ್ಸ್, ಮಜಾಭಾರತ, ಡಾನ್ಸ್ ಕಾರ್ಯಕ್ರಮಗಳನ್ನು ಮರುಪ್ರಸಾರ ಮಾಡಿದರೆ ಮತ್ತೆ ನೋಡುವ ಅವಕಾಶ ಸಿಗುತ್ತದೆ. ನೆನಪುಗಳು ಮರುಕಳಿಸುತ್ತವೆ. ಶಾಲೆಗೆ ರಜೆ ಇರುವುದರಿಂದ ಮಕ್ಕಳಿಗೂ ಮನೋರಂಜನೆ ಸಿಕ್ಕಂತಾಗುತ್ತದೆ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಫಲಪ್ರದವಾಗದ ಟೀಕೆಗಳು

ಕಿರುತೆರೆಯಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳ ತಪ್ಪು ಒಪ್ಪುಗಳ ಬಗ್ಗೆ ಅರಿವು ಮೂಡಿಸಲು 'ಸುಧಾ' ಪತ್ರಿಕೆಯು ಜಾಣರ ಪೆಟ್ಟಿಗೆ ಎಂಬ ವಿಭಾಗವನ್ನು ಶುರುಮಾಡಿ ವರ್ಷಗಳೇ ಸರಿದಿವೆ. ಅದರಲ್ಲಿ ವೀಕ್ಷಕರು ಬರೆಯುತ್ತಿರುವ ಟೀಕೆ, ವಿಮರ್ಶೆಗಳನ್ನು ಯಾವುದೇ ನಿರ್ದೇಶಕರೂ ಪಾಲಿಸುತ್ತಲೇ ಇಲ್ಲ ಎಂಬುದು ವಿಷಾದನೀಯ. ಕೆಲವು ಧಾರಾವಾಹಿಗಳ ಬಗ್ಗೆ ಪ್ರತಿವಾರವೂ ಟೀಕೆಗಳು ಮಾತ್ರವಲ್ಲ ಪ್ರಶಂಸೆಗಳೂ ವ್ಯಕ್ತವಾಗುತ್ತಿವೆ. ಯಾರು ಏನೇ ಬರೆಯಲಿ ನಮಗೂ ಅದಕ್ಕೂ ಸಂಬಂಧವೇ ಇಲ್ಲ ಎಂಬಂತೆ ನಿರ್ದೇಶಕರು ವರ್ತಿಸುತ್ತಿದ್ದಾರೆ.

ಒಂದು ಸಲ ಹೆಸರು ಗಳಿಸಿಬಿಟ್ಟರೆ ಸಾಕು ಹೇಗಿದ್ದರೂ ಜನ ನೋಡುತ್ತಾರೆ ಎಂಬ ಭಾವನೆಯನ್ನು ಬಿಟ್ಟು ಜನರ ಅಭಿಪ್ರಾಯಗಳಿಗೂ ಬೆಲೆ ಕೊಡಬೇಕು. ಏಕತಾನತೆ ಅನಿಸಿದರೆ ವೀಕ್ಷಕರಿಗೂ ಬೇಸರ ನಟ– ನಟಿಯರಿಗೂ ಕಿರಿಕಿರಿ ಆಗುತ್ತದೆ ಎನ್ನುವುದುದನ್ನು ಮರೆಯಬಾರದು. ಕಲರ್ಸ್ ಕನ್ನಡದ 'ಕನ್ನಡತಿ' ಚೆನ್ನಾಗಿ ಮೂಡಿ ಬರುತ್ತಿದ್ದರೂ ಕೆಲವು ಕಡೆ ನಿರ್ದೇಶಕರು ಎಡವುತ್ತಿದ್ದಾರೆ. ಭುವಿಯ ಮನೆಯ ಟಾಯ್ಲೆಟಿನ ಬೀಗ ಹೆಬ್ಬಾಗಿಲಿಗೆ ಹಾಕುವ ಬೀಗದಷ್ಟು ದೊಡ್ಡದಾಗಿದೆ. ಊಟದ ಸಾಲಿನಲ್ಲಿ ಕುಳಿತು ವರು, ಸಾನಿಯಾ ಅವರು ಚುಚ್ಚು ಮಾತಿನಲ್ಲಿ ಗುದ್ದಾಡಿಕೊಳ್ಳುತ್ತಿರುವುದೂ ಅದು ಬೇರೆ ಯಾರಿಗೂ ಕೇಳದಿರುವುದು ಇವೆಲ್ಲಾ ಅಸಹಜ ಕ್ರಿಯೆಯಾಗಿದೆ.

—ಎನ್. ಕೃಷ್ಣಮೂರ್ತಿ ರಾವ್, ಬೆಂಗಳೂರು